ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1284/2022

| | | | |
|---|---|---|---|
| ಹೆಸರು | : | ಡಾಃ ರಾಘವೇಂದ್ರ ಟಿ ಎಸ್ | ಪಿ.ಡಬ್ಲ್ಯೂ :5 |
| ತಂದೆ ಹೆಸರು | : | ರಾಜಶೇಖರ್ | ಸಿ.ಡಬ್ಲ್ಯೂ :5 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ವೈದ್ಯಾಧಿಕಾರಿಗಳು, ಹೇಮಾವತಿ ಆಸ್ಪತ್ರೆ , ತುಮಕೂರು | |
| ವಾಸಸ್ಥಳ | : | ತುಮಕೂರು | |

ಸಾಕ್ಷಿಯನ್ನು ದಿಃ09-07-2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

2012 ನೇ ಸಾಲಿನಿಂದ ರಿಂದ ಇಂದಿನವರಗೊ ಹೇಮಾವತಿ ಆಸ್ಪತ್ರೆ , ತುಮಕೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ.

ದಿಃ 13-02-2022 ರಂದು ರಾತ್ರಿ 11.50 ಕ್ಕೆ ಆಸ್ಪತ್ರೆಯಲ್ಲಿ ಸೇವೆಯಲ್ಲಿದ್ದಾಗ ಚಾಸಾ -2 ಪ್ರಕಾಶ್ ರವರು ರಸ್ತೆ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗೆಂದು ಆಸ್ವತ್ರೆಗೆ ಬಂದಿದ್ದರು , ಅವರನ್ನು ಪರೀಕ್ಷೆಗೆ ಒಳಪಡಿಸಲಾಗಿ ಅವರ ಮೈ ಮೇಲೆ ಈ ಕೆಳಕಂಡ ಗಾಯಗಳು ಕಂಡುಬಂದವು .

1. ಎಡಗಾಲಿನ 2 ಮೂಳೆಗಳು ಮುರಿದಿದ್ದವು
2. ಬಲಗಾಲಿನ ಮೇಲೆ ತರಚಿದ ಗಾಯ
3. ಬೆನ್ನಿನ ಮೇಲೆ ತರಚಿದ ಗಾಯ

ಮೇಲಿನ ಗಾಯಗಳಲ್ಲಿ ಮೊದಲನೇ ಗಾಯವು ತೀವ್ರ ಸ್ವರೂಪದ ಮತ್ತು 2 ಹಾಗೂ 3 ನೇ ಗಾಯಗಳು ಸಾಧಾರಣ ಸ್ವರೂಪದ ಗಾಯಗಳಾಗಿದ್ದವು . ಅವರಿಗೆ ಚಿಕಿತ್ಸೆ ನೀಡಿದ್ದ ಸಂಬಂಧ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ . ಸಾಕ್ಷಿಯು ಗಾಯದ ಪ್ರಮಾಣ ಪತ್ರ ಮತ್ತು ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -3 ಮತ್ತು 3 (ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಮೇಲೆ ಹೇಳಿದಂತಹ ಗಾಯಗಳು ಯಾವುದೇ ವ್ಯಕ್ತಿಯು ಸ್ವತಃ ಅಪಘಾತ ಮಾಡಿಕೊಂಡರೂ ಸಹಾ ಉಂಟಾಗುತ್ತವೆ ಎಂದರೆ ಸರಿ . ಯಾವ ವಾಹನದಿಂದ ಅಪಘಾತ ವಾಗಿದೆ ಎಂಬ ವಿಚಾರ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ, ಆಸ್ಪತ್ರೆಯ ದಾಖಲೆಯಲ್ಲಿ ಇರುತ್ತದೆ . ಗಾಯಾಳು ನೀಡಿರುವ ಮಾಹಿತಿಯ ಆಧಾರದಲ್ಲಿ

ಸದರಿ ವಿವರಗಳನ್ನು ನಮೂದಿಸುತ್ತೇವೆ ಎಂದರೆ ಸರಿ .

ಚಾಸಾ -2 ರವರಿಗೆ ಹೆಚ್ಚಿನ ಪರಿಹಾರ ದೊರೆಯಲಿ ಎಂದು ನಿಪಿ-3 ರನ್ನು ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.